ಖಾಲಿಯಿರುವ 300 ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಬರೆಯಲಾಗಿದೆ. ಅಲ್ಲಿಂದ ಆಯ್ಕೆಪಟ್ಟಿ ಬಂದ ಕೂಡಲೇ, ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತದೆ.

ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬಲು ಕ್ರಮ ಕೈಗೊಳ್ಳಲಾಗುತ್ತದೆ.

ಪಶುವೈದ್ಯಕೀಯ ಸಹಾಯಕರ 4 ಹುದ್ದೆಗಳು ಖಾಲಿಯಿದ್ದು, ಇದರಲ್ಲಿ ದಿನಾಂಕ:17-02-2009 ರಂದು 07 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ

ಇ) ಕೋಲಾರ ಜಿಲ್ಲೆ, ಮುಳುಬಾಗಿಲು ತಾಲ್ಲೂಕಿಗೆ 2007-08 2008-09 ರಲ್ಲಿಸರ್ಕಾರದಿಂದ ಹೊಸದಾಗಿ ಎಷ್ಟು ಪಶುಸಂಗೋಪನಾ ಕೇಂದ್ರಗಳು ಮಂಜೂರಾಗಿರುತ್ತವೆ? ಮಂಜೂರಾಗಿದ್ದಲ್ಲಿ ಯಾವ ಯಾವ ಗ್ರಾಮ ಪಂಚಾಯತ್‌ಗಳಿಗೆ ಮಂಜೂರು ಮಾಡಲಾಗಿದೆ?

ಕೋಲಾರ ಜಿಲ್ಲೆ ಮುಳುಬಾಗಿಲು ತಾಲ್ಲೂಕಿನಲ್ಲಿ 2007-08ನೇ ಸಾಲಿನಲ್ಲಿ ಒಂದು ಪಶುಚಿಕಿತ್ಸಾಲಯವನ್ನು ತಿಮ್ಮಾರಾವುತನಹಳ್ಳಿ (ತಿಮ್ಮರಾವುತನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ) ತೆರೆಯಲು ಮಂಜೂರಾತಿ ನೀಡಲಾಗಿದೆ. 2008-09ನೇ ಸಾಲಿನಲ್ಲಿ ಯಾವುದೇ ಪಶುಚಿಕಿತ್ಸಾಲಯ ಮಂಜೂರಾಗಿರುವುದಿಲ್ಲ.

ಸಂಖ್ಯೆ: ಪಸಂಮೀ 133 ಪಸಸೇ 2009

(ರೇವೂನಾಯಕ್ ಬೇಳಮಗಿ)
ಪಶುಸಂಗೋಪನಾ ಸಚಿವರು.

## ಕರ್ನಾಟಕ ವಿಧಾನಸಭೆ
## 13ನೇ ವಿಧಾನಸಭೆ 2ನೇ ಅಧಿವೇಶನ

**119 ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)**

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು.**

ಅ) ನಂಜುಂಡಪ್ಪ ವರದಿಯಲ್ಲಿ ಹಿಂದುಳಿದಿರುವ ತಾಲ್ಲೂಕುಗಳಿಗೆ ಗ್ರಾಮೀಣಾಭಿವೃದ್ಧಿಗೆ ವಿವಿಧ ಕಾಮಗಾರಿಗಳಿಗೆ, ಅಭಿವೃದ್ಧಿ ಹೊಂದಿದ ತಾಲ್ಲೂಕುಗಳಿಗಿಂತ ಎಷ್ಟು ಹಣವನ್ನು ಹೆಚ್ಚಿಗೆ ಮೀಸಲಿಡಲಾಗಿದೆ (ವಿವರ ನೀಡುವುದು);

ನಂಜುಡಪ್ಪ ವರದಿಯಲ್ಲಿ ಹಿಂದುಳಿದಿರುವ ತಾಲ್ಲೂಕುಗಳಿಗೆ ಗ್ರಾಮೀಣಾಭಿವೃದ್ಧಿ ಇಲಾಖೆಯ ವಿವಿಧ ಕಾಮಗಾರಿಗಳಿಗೆ 8 ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಯಡಿ 5500 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.

ಆ) 2008-09ನೇ ಸಾಲಿನಲ್ಲಿ ನಂಜುಂಡಪ್ಪ ವರದಿಯಲ್ಲಿ ಸೇರಿರುವ ತಾಲ್ಲೂಕುಗಳಿಗೆ ತೆಗೆದುಕೊಂಡಿರುವ ವಿಶೇಷ ಅನುದಾನ ಹಾಗೂ ಕಾರ್ಯಕ್ರಮಗಳೇನು?

ವಿವರವನ್ನು ಅನುಬಂಧ-Iರಲ್ಲಿ ಒದಗಿಸಲಾಗಿದೆ.

ಇ) ನಂಜುಡಪ್ಪ ವರದಿಯ ಬದ್ಧತೆಯನ್ನು ಗ್ರಾಮೀಣಾಭಿವೃದ್ಧಿಯಲ್ಲಿ ಸಂಪೂರ್ಣವಾಗಿ ಅನುಷ್ಠಾನಗೊಳಿಸಲು ಯಾವ ಕಾಲ ಮಿತಿಯನ್ನು ಹಮ್ಮಿಕೊಳ್ಳಲಾಗಿದೆ.

ನಂಜುಡಪ್ಪ ವರದಿಯ ಬದ್ಧತೆಯನ್ನು ಗ್ರಾಮೀಣಾಭಿವೃದ್ಧಿಯಲ್ಲಿ ಅನುಷ್ಠಾನಗೊಳಿಸಲು ವಿಶೇಷ ಅಭಿವೃದ್ಧಿ ಯೋಜನೆಯನ್ನು 8 ವರ್ಷಗಳ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸುವ ಗುರಿಯನ್ನು ಹಮ್ಮಿಕೊಳ್ಳಲಾಗಿದೆ.

**(ಶೋಭಾ ಕರಂದ್ಲಾಜೆ)**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ**
**ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು**

**ವಿಧಾನ ಸಭೆ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ 119ರ ಅನುಬಂಧ-1**
**2008-09 ನೇ ಸಾಲಿನಲ್ಲಿ ನಂಜುಡಪ್ಪ ವರದಿಯಲ್ಲಿ ಸೇರಿರುವ ತಾಲ್ಲೂಕುಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ತೆಗೆದುಕೊಂಡಿರುವ ವಿಶೇಷ ಕಾರ್ಯಕ್ರಮಗಳ ವಿವರ:**

(ರೂ.ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಯೋಜನೆ | ಆಯವ್ಯಯ ಹಂಚಿಕೆ |
|---|---|---|
| 1 | ಡಾ: ನಂಜುಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕುಗಳಲ್ಲಿ ರಸ್ತೆ ಕಾಮಗಾರಿಗಳು | 200.00 |
| 2 | ಗ್ರಾಮೀಣ ಸಂಪರ್ಕ | 20.00 |
| 3 | ಬ್ಲಾಕ್ ಅನುದಾನ (ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ) (ಗ್ರಾಮೀಣ ರಸ್ತೆಗಳು) | 80.00 |

| | | |
|---|---|---|
| 4 | ಹಿಂದುಳಿದ ತಾಲ್ಲೂಕುಗಳಲ್ಲಿ ವಿಶೇಷ ಕೆಲಸಗಳು (RIDF-NABARD) | 52.11 |
| 5 | ಜಿಲ್ಲಾ ಪಂಚಾಯತ್ ಕೆರೆಗಳ ಪುರ್ನವಸತಿ ಮತ್ತು ಪುನಃಶ್ಚೇತನ | 50.00 |
| 6 | ಕರ್ನಾಟಕ ಗ್ರಾಮೀಣ ಬಡತನ ಹಾಗೂ ಪಂಚಾಯಿತಿ ಯೋಜನೆ ಇ.ಎ.ಪಿ. (ಗ್ರಾಮ ಸ್ವರಾಜ್) | 160.03 |
| 7 | ಗ್ರಾಮೀಣ ನೀರು ಸರಬರಾಜು | 100.00 |
| | ಒಟ್ಟು | **662.14** |

## ಕರ್ನಾಟಕ ವಿಧಾನ ಸಭೆ

**121 ಬಾಲಕೃಷ್ಣ ಹೆಚ್.ಪಿ.(ಮಾಗಡಿ)**
**ಇಂಧನ ಸಚಿವರು.**

****

ಅ) 'ಪ್ರಸ್ತುತ ರಾಜ್ಯದಲ್ಲಿ ಗೃಹ ಬಳಕೆ, ಕೃಷಿ ಪಂಪ್ ಸೆಟ್ ಹಾಗೂ ಕೈಗಾರಿಕೆಗಳಿಗೆ ದಿನಕ್ಕೆ ಎಷ್ಟು ಅವದಿ ಹಾಗೂ ಯಾವ ಪ್ರಮಾಣದಲ್ಲಿ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ (ವಿವರ ನೀಡುವುದು);

ಪ್ರಸ್ತುತ ರಾಜ್ಯದ ನಗರ ಪ್ರದೇಶಗಳಲ್ಲಿ ಗೃಹ ಬಳಕೆ, ಕೈಗಾರಿಕೆಗಳಿಗೆ ದಿನದ 24 ಗಂಟೆಗಳ ಅವಧಿಗೆ ಹಾಗೂ ಗ್ರಾಮೀಣ ಪ್ರದೇಶಗಳ ಗೃಹ ಬಳಕೆ, ಕೈಗಾರಿಕೆ ಹಾಗೂ ಕೃಷಿ ಬಳಕೆದಾರರಿಗೆ ದಿನದ 6 ಗಂಟೆಗಳ ಅವಧಿಗೆ 3 ಫೇಸ್‌ನಲ್ಲಿ ಮತ್ತು 6 ಗಂಟೆಗಳ ಅವಧಿಗೆ ಸಿಂಗಲ್ ಫೇಸ್‌ನಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

2007–08ನೇ ಸಾಲಿನಲ್ಲಿ ರಾಜ್ಯದಲ್ಲಿ ಗೃಹ ಬಳಕೆ, ಕೈಗಾರಿಕೆ ಹಾಗೂ ಕೃಷಿ ಪಂಪುಸೆಟ್ಟುಗಳು ಬಳಸಿದ ವಿದ್ಯುತ್ತಿನ ಪ್ರಮಾಣದ ವಿವರಗಳು ಕೆಳಕಂಡಂತಿವೆ.

| ಕ್ರಮ ಸಂಖ್ಯೆ | ವಿವರ | ಬಳಸಿದ ವಿದ್ಯುತ್ತಿನ ಪ್ರಮಾಣ (ಮಿಲಿಯನ್ ಯೂನಿಟ್ಟುಗಳಲ್ಲಿ) |
|---|---|---|
| 1 | ಗೃಹ ಬಳಕೆ | 6,268 |
| 2 | ಕೈಗಾರಿಕೆ | 6,907 |
| 3 | ಕೃಷಿ ಪಂಪುಸೆಟ್ಟುಗಳು | 8,540 |